ಬಸ್ತಿಗಳನ್ನು ನಾವು ಕವರ್ ಮಾಡುವುದಕ್ಕೆ ಸರ್ಕಾರಕ್ಕೆ ಅನುಕೂಲವಾಗುತ್ತದೆ. ಆದರಲ್ಲೂ ಕೂಡ ಎಲ್ಲೆಲ್ಲಿ ಲಂಬಾಣಿ ತಾಂಡಗಳು ಹರಿಜನ ಬಸ್ತಿಗಳು ಅಥವಾ ನೊಮಾಡಿಕ್ ಅಥವಾ ಸೆಮಿ ನೊಮೆಡಿಕ್ ಟ್ರೈಬ್ಸ್ ಇದ್ದಾವೆ ಅವುಗಳೆಲ್ಲವನ್ನೂ ಕವರ್ ಮಾಡುವಂತಹ ವಿಚಾರದಲ್ಲಿ ಈಗಾಗಲೆ ನಾವು ಕೆ.ಇ.ಬಿ. ಗೆ ತಿಳಿಸಿದ್ದೇವೆ. ಅಧ್ಯಕ್ಷರೆ ಇದರ ಬಗ್ಗೆ ಸ್ಪಷ್ಟವಾದ ಆದೇಶವನ್ನು ನಾವು ಜಾಗ್ರತೆ ಕಳುಹಿಸುಕೊಡುತ್ತೇವೆ. ಆದಷ್ಟು ಶೀಘ್ರವಾಗಿ ಕವರ್ ಮಾಡಬೇಕೆಂದು ಮತ್ತು ಮುಖ್ಯವಾಗಿ ತಮ್ಮ ಹೊಸದುರ್ಗ ತಾಲ್ಲೂಕಿನಲ್ಲಿ ಇರುವಂತಹ ಬಸ್ತಿಗಳನ್ನು ಸಹ ಶೀಘ್ರವಾಗಿ ತೆಗೆದುಕೊಳ್ಳುವುದಕ್ಕೆ ನಾವು ಆದೇಶವನ್ನು ಕಳುಹಿಸಿಕೊಡುತ್ತೇವೆ.

ಹಿಂದಿ ಭಾಷೆಯನ್ನು ಕಲಿಯುವುದರ ಬಗ್ಗೆ

2864 - ಶ್ರೀ ಬಿ.ಐ. ಪಾಟೀಲ್ (ಬೆಳಗಾಂ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1. *ಕನ್ನಡ ಮಾಧ್ಯಮ ಪ್ರೌಢಶಾಲೆಗಳಿಲ್ಲದ ಶಾಲೆಗಳಲ್ಲಿ ಕಲಿಯುವ ವಿದ್ಯಾರ್ಥಿಗಳಿಗೆ ರಾಷ್ಟ್ರಭಾಷೆ ಹಿಂದಿ ಕಲಿಯಲು ಅವಕಾಶದಿಂದ ವಂಚಿಸಲಾಗಿದೆಯೇ?*
2. *ಹಾಗಿದ್ದರೆ ಈ ತಪ್ಪನ್ನು ಸರಿಪಡಿಸಲು ಸರ್ಕಾರವು ಯಾವ ಕ್ರಮವನ್ನು ಕೈಗೊಂಡಿದೆ.*

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

1. ವಂಚಿತರಾಗಿಲ್ಲ. ಪ್ರೌಢಶಾಲೆಗಳಲ್ಲಿ ಕನ್ನಡ ಭಾಷೆಯನ್ನು ಮಾತ್ರ ಕಡ್ಡಾಯ ಮಾಡಲಾಗಿದೆ. ಉಳಿದ ಎರಡು ಭಾಷೆಗಳನ್ನು ಆಯ್ಕೆ ಮಾಡುವ ಸ್ವಾತಂತ್ರ್ಯವನ್ನು ವಿದ್ಯಾರ್ಥಿಗಳಿಗೆ ನೀಡಲಾಗಿದೆ. ಇದರಲ್ಲಿ ಹಿಂದಿ ಭಾಷೆಯನ್ನು ಆಯ್ಕೆ ಮಾಡಿಕೊಳ್ಳಬಹುದಾಗಿದೆ.

2. ಉದ್ಭವಿಸುವುದಿಲ್ಲ.

B.I. PATIL : Sir, the answer is not satisfactory. I wish to submit that the Government is frequently changing the language policy since 1982. Since 1988-89, the Government has implemented new language policy neglecting the judgement passed by the Hon'ble High Court in this behalf. According to the said policy, students have to offer mother-tongue as first language and Kannada as second language as far as Minority students are concerned i.e., Marathi, Urdu, Tamil and Telugu. For the third language students have been asked to choose either Hindi or English. Generally, students are offering English subject as third language. As a result of this, our National Language i.e., Hindi has been devalued in the new language policy. The Central Government is promoting National language.

MR.SPEAKER : You frame your question. Do not make a statement.

SRI B.I.PATIL : Whether the Government would adopt the old policy i.e., Hindi for 50 marks and Kannada subject for 50 marks instead of

100 marks for one subject of Kannada and option for Hindi or English should we withdrawn in the interest of minority students and teachers from next academic year? Will the Government kindly adopt the old policy?

ಶ್ರೀ ಎಂ. ವೀರಪ್ಪ ಮೊಯಿಲಿ : ಅಧ್ಯಕ್ಷರೆ, ನಾನು ಅವರ ಪ್ರಶ್ನೆಯನ್ನು ಅಂದಾಜು ಮಾಡಿ ಉತ್ತರ ಕೊಡುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಅಧ್ಯಕ್ಷರೆ, ಈಗ ಏನಾಗಿದೆ ಅಂದರೆ ಹಿಂದಿ 50 ಅಂಕಗಳು ಇಂಗ್ಲಿಷ್ 50 ಅಂಕಗಳು ಆಗಿರುವುದರಿಂದ ಅವರು ಹಿಂದಿ ಕಲಿಯಲಿಕ್ಕೆ ಆಗುತ್ತಿಲ್ಲ, ಇಂಗ್ಲಿಷ್ ಆಪ್ಟ್ ಮಾಡಿದರೆ ಹಿಂದಿ ಕಲಿಯಲಿಕ್ಕೆ ಆಗುತ್ತಿಲ್ಲ. ಇಲ್ಲಿ ಹಿಂದಿ ಕಲಿಯಲಿಕ್ಕೂ ನಮಗೆ ಅವಕಾಶ ಆಗಬೇಕು. ಕನ್ನಡ ಕೂಡ ಕಡ್ಡಾಯ ಮಾಡಿ, ಅದರ ಬಗ್ಗೆ ಅವರದ್ದು ತಕರಾರು ಇಲ್ಲ, 50 ಅಂಕಗಳು, 50 ಅಂಕಗಳು ಎಂದು ಮಾಡಲಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಅಧ್ಯಕ್ಷರೆ, ಈಗ ಇರತಕ್ಕಂಥ ನೀತಿ ಪ್ರಕಾರ 5ನೇ ತರಗತಿಯಿಂದ 7ನೇ ತರಗತಿಯವರೆಗೆ ಮಾತೃಭಾಷೆಗೆ 100 ಅಂಕಗಳು, ಆಂಗ್ಲ ಭಾಷೆ ಅದು ಕನ್ನಡ ಪ್ರಥಮ ಭಾಷೆ ತೆಗೆದುಕೊಂಡರೆ, ಆಂಗ್ಲಭಾಷೆ ಅಥವಾ ಅವರು ಕನ್ನಡ ಮಾತೃಭಾಷೆ ಮೊದಲನೆಯ ಭಾಗ ತೆಗೆದುಕೊಳ್ಳದೇ ಇದ್ದರೆ ಅವರು ಕನ್ನಡ ತೆಗೆದುಕೊಳ್ಳಬೇಕಾಗುತ್ತದೆ. ಅದಕ್ಕೆ 100 ಅಂಕಗಳು. ಕನ್ನಡೇತರರಿಗೆ ಕನ್ನಡ ಎರಡನೆಯ ಭಾಷೆಯಾಗಿ ಕಡ್ಡಾಯ ಇದೆ. ಮೂರನೆಯದು ಹಿಂದಿ. ಹಿಂದಿ ನೂರು ಅಂಕಗಳು. ಆದರೆ ಅದು ಪರೀಕ್ಷೆಗೆ ಒತ್ತಾಯವಿಲ್ಲ, ಆ ಭಾಷೆಯಲ್ಲಿ ಉತ್ತೀರ್ಣರಾಗಬೇಕೆಂದು ಒತ್ತಾಯ ಇಲ್ಲ, ಇದು 5ನೇ ತರಗತಿಯಿಂದ 7ನೇ ತರಗತಿಯವರೆಗೆ ಇರತಕ್ಕಂಥ ಒಂದು ಮಾರ್ಗದರ್ಶನ. ಇನ್ನು 8ನೇ ತರಗತಿಯಿಂದ 10ನೇ ತರಗತಿಯವರೆಗೆ ನಾವು ಹೊಸ ನೀತಿ ಬರುವ ವರ್ಷದಿಂದ ಮಾಡುತ್ತೇವೆ. ಹೊಸ ನೀತಿ ಅಂದರೆ 8-9ನೇ ತರಗತಿಗೆ ಹೊಸ ನೀತಿ ಇದೆ. 10ನೇ ತರಗತಿಗೆ ಈ ವರ್ಷ ಹೊಸ ನೀತಿ ಮಾಡಲಿಲ್ಲ, ಬರುವ ವರ್ಷ ಹೊಸದಾಗಿ ಜಾರಿಗೆ ಬರುತ್ತದೆ, ಅನುಷ್ಠಾನವಾಗುತ್ತದೆ. ಈಗ ಹಳೆಯ ನೀತಿ ಪ್ರಕಾರ 8ನೇ ತರಗತಿಯಿಂದ 10ನೇ ತರಗತಿಯ ಪ್ರಕಾರ, ಮಾತೃಭಾಷೆಗೆ 150 ಅಂಕಗಳು, ಆಂಗ್ಲ ಭಾಷೆಗೆ 100 ಅಂಕಗಳು ಅಥವಾ ಬೇರೆ ಭಾಷೆಗಳು. ಹಿಂದಿಗೆ 100 ಅಂಕಗಳು, ಆದರೆ ಈ ಮೂರು ಭಾಷೆಗಳಲ್ಲಿ ಒಂದು ಭಾಷೆ ಕನ್ನಡ ಕಡ್ಡಾಯವಾಗಿರತಕ್ಕಂತಾದ್ದು. ಇದು ಹಳೆಯ ನೀತಿ, ಆದರೆ ಹೊಸ ನೀತಿಯ ಪ್ರಕಾರ ಅದು ಮಾತೃ ಭಾಷೆಗೆ 125 ಅಂಕಗಳು. ಆಮೇಲೆ ಎರಡನೆಯ ಭಾಷೆ ಅದು ಆಂಗ್ಲಭಾಷೆ, ಕನ್ನಡ ತೆಗೆದುಕೊಂಡರೆ, ಕನ್ನಡೇತರರು ಕನ್ನಡ ಎರಡನೆಯ ಭಾಷೆ ಕಡ್ಡಾಯವಾಗಿ ತೆಗೆದುಕೊಳ್ಳಬೇಕು, ಅದು 100 ಅಂಕಗಳು. ಮತ್ತೆ ಹಿಂದಿ 100 ಅಂಕಗಳು, ಅದು ಕಡ್ಡಾಯ. ಇದು ಈಗ ಇರತಕ್ಕ ನೀತಿ. ಈಗ ಹೊಸ ಪದ್ಧತಿ ಪ್ರಕಾರ ಕನ್ನಡಕ್ಕೆ ಕನ್ನಡೇತರರು ಕನ್ನಡ ತೆಗೆದುಕೊಂಡರೆ 15 ಗ್ರೇಸ್‌ಮಾರ್ಕ್ಸ್ ಇದೆ. ಆದರೆ ಕನ್ನಡ ಕಡ್ಡಾಯ. ಆಂಗ್ಲ ಭಾಷೆ, ಮತ್ತೆ ಹಿಂದಿ ಭಾಷೆಯನ್ನು ಕನ್ನಡದವರು ತೆಗೆದುಕೊಂಡರೆ 15 ಗ್ರೇಸ್ ಮಾರ್ಕ್ಸ್ ಇದೆ. ಇದು ಈ ಹಿಂದೆ ಇರತಕ್ಕಂಥ ಮತ್ತು ಈಗ ಇರತಕ್ಕಂಥ ಭಾಷಾ ನೀತಿ.

SRI QAMARUL ISLAM: There is a circular issued by the Government for the students from 8th to 10th standard and even for the students from 5th standard. Even according to the court direction, three-language formula has to be adopted. We, the minorities, are insisting that there should be 100 marks for Kannada. But by the recent circular issued by the Government, eventhough the boys have studied from the begining till 9th standard with 100 marks in Kannada, they have changed it for 50 marks which was not our demand. Our demand is that we want to learn Kannada. Out of three languages, one is the mother tongue, another is the State language and the third one is English. For mother tongue, there will be 125 marks out of 625 marks. Out of 125 marks, if you give 25 marks for Hindi, we don't mind, giving it from our mother tongue. But we don't want that Kannada should have less marks or 50 marks. Because, our minority boys even after learning Kannada for ten years, if they go for interviews, the Department will say, " you have not studied full-fledged Kannada ". Kindly go through the Circular issued about one or two months back. We want that Circular to be withdrawn since the circular is a violation of the Court order. According to Court order, there should be three languages, first language, second language and third language, i.e., for mother tongue there should be 125 marks, for Kannada the State language, there should be 100 marks and for English, there should be 100 marks or Hindi. If anybody wants to learn Hindi as National language, let them have it, instead of 125 marks, you can say 150 marks...

(Interruptions)

SRI B.I.PATIL : I am ready for...

(Interruptions)

SRI QAMARUL ISLAM : I will produce that circular, Our boys are taking up examinations. The circular says that we should learn Kannada only for 50 marks. We don't want to learn Kannada with 50 marks only for the sake of getting jobs in the Government. We want to learn Kannada. I have been demanding that for our minority schools, Kannada teachers should be appointed. Why should we study four languages?

(Interruptions)

SRI B.I.PATIL : I am not talking ..

(Interruptionns)

SRI QAMARUL ISLAM : 50 marks for Kannada means, even though after learning Kannada, we cannot get jobs..

(Interruptions)

SRI K.C.MODAGEKAR DESAI : Hon'ble Member is quoting the wrong circular..

SRI QAMARUL ISLAM : There is no problem for Marati or Urdu. We have to choose from either Hindi or English. If you want Hindi, you have it. Instead of 150 marks for mother tongue, for Urdu or Marati...

(Interruptions)

MR.SPEAKER : Minister for Education, do you have any answer?

ಶ್ರೀ ಎಂ. ವೀರಪ್ಪ ಮೊಯಿಲಿ : ನಮ್ಮ ನೀತಿಯ ಬಗ್ಗೆ ನಾನು ಸ್ಪಷ್ಟಪಡಿಸಿದ್ದೇನೆ. ಕನ್ನಡ ಕಡ್ಡಾಯ ಇದೆ. ಇದಕ್ಕೆ 100 ಮಾರ್ಕ್ಸ್ ಇದೆ ಎಸ್.ಎಸ್.ಎಲ್.ಸಿ.ಗೆ ವರ್ಷ 3ನೇ ಭಾಷೆಯಾದ ಹಿಂದಿಯನ್ನು ಕಡ್ಡಾಯ ಮಾಡಿಲ್ಲ. ಏಕೆಂದರೆ, ಹಿಂದಿ ಅಧ್ಯಾಪಕರು ಇಲ್ಲ. ಹೊಸ ನೀತಿಯ ಪ್ರಕಾರ 10ನೇ ಕ್ಲಾಸ್‌ನಲ್ಲಿ ಇಂಟ್ರಡ್ಯೂಸ್ ಮಾಡಿಲ್ಲ. ಆದುದರಿಂದ, 3ನೇ ಭಾಷೆ ಏನಿದೆ, ಅದಕ್ಕೆ 50 ಮಾರ್ಕ್ಸ್ ಇಟ್ಟಿದ್ದೇವೆ. ಆದರೆ ಇದು ಕೇವಲ 1991-92ನೇ ಸಾಲಿಗೆ ಮಾತ್ರ. 50 ಮಾರ್ಕ್ಸ್‌ಗೆ ಏತಕ್ಕೆ ಇಳಿಸಿದ್ದೇವೆಂದರೆ ನಮ್ಮಲ್ಲಿ ಹಿಂದಿ ಉಪಾಧ್ಯಾಯರಿಲ್ಲ ಎಂಬ ಕಾರಣಕ್ಕಾಗಿ. 1992-93ನೇ ಸಾಲಿನಿಂದ ಇದಕ್ಕೆ 100 ಮಾರ್ಕ್ಸ್ ಇರುತ್ತದೆ. 2 ಮತ್ತು 3ನೇ ಭಾಷೆಗೆ 100 ಮಾರ್ಕ್ಸ್ ಇರುತ್ತದೆ. ಇದರಲ್ಲೇನೂ ಅನುಮಾನವೇ ಇಲ್ಲ. 3ನೇ ಭಾಷೆಗೂ 100 ಮಾರ್ಕ್ಸ್‌ನ್ನು ನಿಗದಿ ಮಾಡಿದರೆ ಅಲ್ಲಿ ಹಿಂದಿ ಉಪಾಧ್ಯಾಯರೇ ಇಲ್ಲದಿರುವುದರಿಂದ ಅವರು ಅಂದರೆ ಆ ಹುಡುಗರು ಹೇಗೆ ಪಾಸ್ ಆಗಬೇಕು ಎಂಬುದನ್ನು ಯೋಚನೆ ಮಾಡಿ ಈ ತೀರ್ಮಾನ ಮಾಡಿದ್ದೇವೆ. ಇದು ಒಂದು ವ್ಯಾವಹಾರಿಕ ವಿಚಾರ. 8 ಮತ್ತು 9ನೇ ಕ್ಲಾಸ್‌ಗೆ 100 ಮಾರ್ಕ್ಸ್ ಇದೆ. 10ನೇ ತರಗತಿಗೆ ಹಿಂದೆ ಅಧ್ಯಾಪಕರು ಇಲ್ಲದಿರುವುದರಿಂದ ಈ ರೀತಿ ಮಾಡಿದ್ದೇವೆ. ಹಿಂದಿ ಅಧ್ಯಾಪಕರನ್ನು ನೇಮಕ ಮಾಡಲಿಕ್ಕೆ ಎಲ್ಲ ಕ್ರಮವನ್ನೂ ತೆಗೆದುಕೊಂಡಿದ್ದೇವೆ. ತಾವು ಪ್ರಸ್ತಾಪ ಮಾಡಿರತಕ್ಕ ಮತ್ತೊಂದು ವಿಚಾರ ಎಂದರೆ ಕನ್ನಡ ಅಧ್ಯಾಪಕರು ಇಲ್ಲದಿರುವ ಬಗ್ಗೆ. ಈಗ ಉರ್ದು ಶಾಲೆಗಳಲ್ಲಿ ಕನ್ನಡ ಅಧ್ಯಾಪಕರನ್ನು ನೇಮಕ ಮಾಡಿದ್ದೇವೆ. ಇನ್ನೂ ಎಲ್ಲೆಲ್ಲಿ ಕನ್ನಡ ಅಧ್ಯಾಪಕರಿಲ್ಲ ಅಲ್ಲಿಗೆ ಇನ್ನು 1-2 ತಿಂಗಳಲ್ಲಿ ನೇಮಕ ಮಾಡುತ್ತೇವೆ. ಕನ್ನಡ ಭಾಷೆಯ ಶಾಲೆಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡಬೇಕಾಗಿದೆ. ಇವತ್ತು ಎಲ್ಲೆಲ್ಲಿ ಆಂಗ್ಲ ಭಾಷೆಯ ಶಾಲೆಗಳ ದಾಳಿ ಹೆಚ್ಚು ಇದೆ ಆಂಥ ಕಡೆ ಕನ್ನಡ ಭಾಷೆಗೆ ಆದ್ಯತೆಯನ್ನು ಕೊಡುವ ಸಲುವಾಗಿ ವಿಶೇಷ ಆದ್ಯತೆಯ ಮೇರೆಗೆ ಕಾರ್ಯಕ್ರಮಗಳನ್ನು ತೆಗೆದುಕೊಂಡು ಆಂಗ್ಲ ಭಾಷೆಗಿಂತಲೂ ಆಕರ್ಷಕವಾಗಿ ನಮ್ಮ ಕನ್ನಡ ಶಾಲೆಗಳನ್ನು ಮಾಡಲು ಮುಂದಿನ ಶೈಕ್ಷಣಿಕ ವರ್ಷದಿಂದ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಬಯಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ನಿಮ್ಮ ಭಾಷಾ ನೀತಿಯೇ ಸರಿಯಾಗಿಲ್ಲ. ಸರ್ಕಾರದ ಭಾಷಾನೀತಿ ಏನೆಂಬುದನ್ನು ಹೇಳಿ.